ಸ್ವಾತಂತ್ರ್ಯದ ಅಮೃತ ಮಹೋತ್ಸವ

ಭಾರತ 2023 INDIA

ಕರ್ನಾಟಕ ಸರ್ಕಾರ

# ಅಭಿಯಾನ ನಿರ್ದೇಶಕರ ಕಚೇರಿ, ರಾಷ್ಟ್ರೀಯ ಜೀವನೋಪಾಯ ಅಭಿಯಾನ

## ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/ ಜೆಂಡರ್/೦೨/೨೦೨೩-೨೪

ದಿನಾಂಕ: 30/10/2023

ಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು

ಮಾನ್ಯರೇ,

ವಿಷಯ: ಗ್ರಾಮ ಪಂಚಾಯತ್ ಮಟ್ಟದಲ್ಲಿ ಲಿಂಗತ್ವ ವೇದಿಕೆಯನ್ನು ರಚಿಸುವ ಕುರಿತು.

ಉಲ್ಲೇಖ: ಗ್ರಾಮೀಣಾಭಿವೃದ್ಧಿ ಮಂತ್ರಾಲಯ ರವರ ಪತ್ರ ಸಂಖ್ಯೆ- ಎ-11060/110/2017-ಖಐ(358843) ದಿನಾಂಕ:09.12.2021

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1) ಕ್ಕೆ ಸಂಬಂಧಿಸಿದಂತೆ, ಮಹಿಳಾ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲು ಮತ್ತು ಮಹಿಳಾ ಸಮಸ್ಯೆಗಳನ್ನು ಬಗೆಹರಿಸಲು ವಿವಿಧ ಲಿಂಗತ್ವ ವೇದಿಕೆಗಳನ್ನು ಯೋಜನೆಯಡಿಯಲ್ಲಿ ರಚಿಸಬೇಕಾಗಿದೆ. ಮುಖ್ಯವಾಗಿ ಸ್ವ-ಸಹಾಯ ಸಂಘಗಳಲ್ಲಿ ಲಿಂಗತ್ವ ಪ್ರಮುಖ ವ್ಯಕ್ತಿಗಳನ್ನು ಆಯ್ಕೆ ಮಾಡುವುದು, ವಾರ್ಡ್ ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಲ್ಲಿ ಸಾಮಾಜಿಕ ಕ್ರಿಯಾ ಸಮಿತಿಗಳನ್ನು ರಚನೆ ಮಾಡಿ ಮಹಿಳಾ ಸಮಸ್ಯೆಗಳ ಕುರಿತು ಚರ್ಚಿಸುವುದು, ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಲ್ಲಿ ಲಿಂಗತ್ವ ವೇದಿಕೆಗಳನ್ನು ರಚನೆ ಮಾಡುವುದು, ತಾಲ್ಲೂಕು ಮಟ್ಟದ ಒಕ್ಕೂಟಗಳಲ್ಲಿ ಸಾಮಾಜಿಕ ಕ್ರಿಯಾ ಸಮಿತಿಗಳು ಹಾಗೂ ತಾಲ್ಲೂಕು ಮಟ್ಟದಲ್ಲಿ ಲಿಂಗತ್ವ ವೇದಿಕೆಗಳನ್ನು ರಚಿಸುವುದು ಹಾಗೂ ಮಹಿಳಾ ಸಮಸ್ಯೆಗಳನ್ನು ಬಗೆಹರಿಸುವುದು ಯೋಜನೆಯ ಗುರಿಯಾಗಿರುತ್ತದೆ.

ಈಗಾಗಲೇ ಸ್ವ-ಸಹಾಯ ಸಂಘಗಳಲ್ಲಿ ಲಿಂಗತ್ವ ಪ್ರಮುಖ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಅದರಂತೆ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳಲ್ಲಿ ಹಾಗೂ ವಾರ್ಡ್ ಮಟ್ಟದ ಒಕ್ಕೂಟಗಳಲ್ಲಿ ಸಾಮಾಜಿಕ ಕ್ರಿಯಾ ಸಮಿತಿಗಳನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ಲಿಂಗತ್ವ ವೇದಿಕೆಗಳು ರಚನೆಯಾಗಿದೆ. ಮುಂದುವರಿದು ಸ್ವ ಸಹಾಯ ಗುಂಪಿನಲ್ಲಿ ಬಗೆಹರಿಸಲಾಗದ ಸಮಸ್ಯೆಗಳನ್ನು ವಾರ್ಡ್ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಉಪಸಮಿತಿಗಳಲ್ಲಿ ಚರ್ಚಿಸಿ ಬಗೆಹರಿಸುವುದು. ಸದರಿ ಸಮಿತಿಗಳಲ್ಲಿ ಬಗೆಹರಿಸಲಾಗದ ವಿಷಯಗಳನ್ನು **ಗ್ರಾಮ ಪಂಚಾಯತಿ ಮಟ್ಟದಲ್ಲಿ ಲಿಂಗತ್ವ ವೇದಿಕೆಗಳನ್ನು** ರಚನೆ ಮಾಡಿ ಸದರಿ ವೇದಿಕೆಗಳ ಮುಖಾಂತರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಉಲ್ಲೇಖ ಪತ್ರದಲ್ಲಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯತಿ ಮಟ್ಟದ ಲಿಂಗತ್ವ ವೇದಿಕೆಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದಂತೆ ರಚಿಸಬೇಕಾಗಿರುತ್ತದೆ.

| ಕ್ರ.ಸಂ. | ಪದನಾಮ | ಸದಸ್ಯತ್ವ |
|---|---|---|
| 1 | ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು | ಅಧ್ಯಕ್ಷರು |
| 2 | ಸಂಜೀವಿನಿ-ಗ್ರಾಮ ಪಂಚಾಯತ್ ಮಟ್ಟದ ಅಧ್ಯಕ್ಷರು/ಉಪ ಅಧ್ಯಕ್ಷರು | ಸದಸ್ಯ ಕಾರ್ಯದರ್ಶಿಗಳು |
| 3 | ಶಾಲಾ ಮುಖ್ಯೋಪಾಧ್ಯಯರು | ಸದಸ್ಯರು |
| 4 | ಅಂಗನವಾಡಿ ಕಾರ್ಯಕರ್ತೆ | ಸದಸ್ಯರು |
| 5 | ಎ.ಎನ್.ಎಂ ಕಾರ್ಯಕರ್ತೆ | ಸದಸ್ಯರು |
| 6 | ಆಶಾ ಕಾರ್ಯಕರ್ತೆ | ಸದಸ್ಯರು |
| 7 | ಪೋಲೀಸ್ ಸಿಬ್ಬಂದಿ | ಸದಸ್ಯರು |
| 8 | ಸಾಮಾಜಿಕ ಕ್ರಿಯಾ ಸಮಿತಿಯ ಮೂರು ಜನ ಸದಸ್ಯರು(ದೂರು ಸ್ವೀಕರಿಸಲಾದ ಸದಸ್ಯರು) | ಸದಸ್ಯರು |
| 9 | ಲಿಂಗತ್ವ ಪ್ರಮುಖ ವ್ಯಕ್ತಿಗಳು | ಸದಸ್ಯರು |

ಗ್ರಾಮ ಪಂಚಾಯತಿ ಮಟ್ಟದ ಲಿಂಗತ್ವ ವೇದಿಕೆಯ ಪಾತ್ರ ಮತ್ತು ಜವಾಬ್ದಾರಿ:

1. ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಮಟ್ಟದ ಲಿಂಗತ್ವ ವೇದಿಕೆಯ ಸಭೆಯನ್ನು ಲಿಂಗತ್ವ ಸಂಪನ್ಮೂಲ ವ್ಯಕ್ತಿಗಳು ತಾಲ್ಲೂಕ ಸಿಬ್ಬಂದಿಗಳ ಸಹಾಯದೊಂದಿಗೆ ಸಭೆಯನ್ನು ಕರೆಯುವುದು
2. ಸದರಿ ಸಭೆಯಲ್ಲಿ ವಾರ್ಡ್ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಲ್ಲಿ ಬಗೆಹರಿಸಲಾಗದ ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸುವುದು. ಬಗೆಹರಿಸಲಾಗದ ಸಮಸ್ಯೆಗಳು ಇದ್ದಲ್ಲಿ ತಾಲ್ಲೂಕು ಮಟ್ಟದ ವೇದಿಕೆಗಳಲ್ಲಿ ಚರ್ಚೆ ಮಡುವುದು ಹಾಗೂ ಈ ಕುರಿತು ವರದಿಯನ್ನು ಲಿಂಗತ್ವ ಸಂಪನ್ಮೂಲ ವ್ಯಕ್ತಿಗಳು ತಯಾರಿಸಿ ಸಮಿತಿ ಸದಸ್ಯರಿಂದ ಸಹಿಯನ್ನು ಪಡೆಯುವುದು.
3. ಸದರಿ ಸಭೆಗೆ ವಾರ್ಡ್ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಸಾಮಾಜಿಕ ಕ್ರಿಯಾ ಸಮಿತಿ ಸದಸ್ಯರು ಹಾಜರಾಗುವುದು.

ಮೇಲ್ಕಂಡ ವೇದಿಕೆಯು ಸ್ವ-ಸಹಾಯ ಸಂಘಗಳ, ವಾರ್ಡ್ ಹಾಗೂ ಒಕ್ಕೂಟಗಳ ಮಹಿಳೆಯರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸಾಮಾಜಿಕ ಅಭಿವದ್ಧಿ ಮತ್ತು ಲಿಂಗತ್ವ ಕುರಿತ ಸಮಸ್ಯೆಗಳನ್ನು ತಾಲ್ಲೂಕು ಸಿಬ್ಬಂದಿಗಳ ಬೆಂಬಲದೊಂದಿಗೆ ಬಗೆಹರಿಸುವುದು ಮುಖ್ಯವಾಗಿರುತ್ತದೆ. ಆದ್ದರಿಂದ ಆಧ್ಯತೆ ಮೇರೆಗೆ ಸದರಿ ವೇದಿಕೆಗಳನ್ನು ದಿನಾಂಕ 15.11.2023ರೊಳಗೆ ರಚಿಸುವುದು ಹಾಗೂ ಈ ಕುರಿತು ದಿನಾಂಕ 16.11.2023 ರೊಳಗೆ ಕೇಂದ್ರ ಕಚೇರಿಗೆ ವರದಿ ಮಾಡುವುದು. ಸದರಿ ವರದಿ ಆಧಾರದ ಮೇರೆಗೆ ತರಬೇತಿಗಳನ್ನು ಕೇಂದ್ರ ಕಚೇರಿಯಿಂದ ಏರ್ಪಡಿಸಲಾಗುವುದು.

ತಮ್ಮ ವಿಶ್ವಾಸಿ,

ಅಪರ ಅಭಿಯಾನ ನಿರ್ದೇಶಕರು,
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್.
ಬೆಂಗಳೂರು

ಪ್ರತಿಯನ್ನು
1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಬೆಂಗಳೂರು.
2. ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್.- ಮಾಹಿತಿಗಾಗಿ
3. ಮುಖ್ಯ ಕಾರ್ಯಾಚರಣೆ ಅಧಿಕಾರಿ(ಕಾ), ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್.
4. ಮುಖ್ಯ ಹಣಕಾಸು ಅಧಿಕಾರಿ, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್
5. ಯೋಜನಾ ನಿರ್ದೇಶಕರುಗಳಿಗೆ ಮತ್ತು ಮುಖ್ಯ ಲೆಕ್ಕಾಧಿಕಾರಿಗಳು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ
6. ಕಛೇರಿ ಪ್ರತಿ